4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸೇಷನ್ಸ್ ಕೇಸ್ ನಂಃ 239/2022
ಫ್ರಾಸಾಃ 12
ಆ ಸಾಃ 14

ಸಾಕ್ಷಿಯ ಹೆಸರುಃ ಸಂಜಯ ಸುಬ್ಬರಾವ ಕುದರೆ

ತಂದೆಯ ಹೆಸರುಃ ಸುಬ್ಬರಾವ ಕುದರೆ

ವಯಸ್ಸುಃ 33 ವರ್ಷ

ಉದ್ಯೋಗಃ ಪಿಸಿ ನಂ.3405 ಸಂಕೇಶ್ವರ ಪೊಲೀಸ ಠಾಣೆ

ವಾಸ್ತವ್ಯಃ ಸಂಕೇಶ್ವರ

ದಿನಾಂಕಃ 01**-12-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 05.02.2019 ರಿಂದ 04.07.2020 ರವರೆಗೂ ಕಿತ್ತೂರ ಪೊಲೀಸ ಠಾಣೆಯಲ್ಲಿ ಪೊಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೆನೆ.

ದಿನಾಂಕ 16.03.2020 ರಂದು ನನಗೆ ಕಿತ್ತೂರ ಪೊಲೀಸ ಠಾಣಾ ಎಎಸ್ಐ ಚಾಸಾ 17 ಎಂ.ಎಫ್.ಗಿರಿಯಾಲ ಇವರು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಿ ನ್ಯಾಯಾಧೀಶರಿಗೆ ಕೊಡುವಂತೆ ಕೊಟ್ಟ ಪ್ರವವ ಮತ್ತು

ಅದರ ಜೊತೆ ಇರುವ ದೂರನ್ನು ನಾನು ಸಂಜೆ 06.45 ಗಂಟೆಗೆ ಕೊಟ್ಟಿದ್ದನ್ನು ಸ್ವೀಕರಿಸಿ ನಾನು ಅದನ್ನು ಕಿತ್ತೂರ ನ್ಯಾಯಾಧೀಶರ ಗೃಹ ಕಚೇರಿಗೆ ಸಂಜೆ 07.10 ಗಂಟೆಗೆ ತೆಗೆದುಕೊಂಡು ಹೋಗಿ ಕೊಟ್ಟೆನು. ಆ ಪ್ರವವಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 50 ಎಂದು ಗುರುತಿಸಲಾಗಿದೆ. ದೂರನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದೆ. ನಾನು ಪ್ರವವ ಮತ್ತು ದೂರನ್ನು ನ್ಯಾಯಾಧೀಶರಿಗೆ ಕೊಟ್ಟು ಬಂದ ಬಗ್ಗೆ ನನ್ನ ವರದಿಯನ್ನು ಕಿತ್ತೂರಿನ ಸಿಪಿಐ ರವರಿಗೆ ಸಲ್ಲಿಸಿರುತ್ತೇನೆ. ಆ ವರದಿಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ 52 ಎಂದು ಗುರುತಿಸಲಾಯಿತು. ನಿಪಿ 52(ಎ) ನನ್ನ ಸಹಿ.

<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ಹೇಳಿದ್ದಾರೆ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4 ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**